ಖರೀದಿಸಲು ತಯಾರಾಗಿದಾರೆ. ಆದರೂ ತಮ್ಮ ಬಗ್ಗೆ ಈ ಅಭಿಮಾನ! ಇಲ್ಲ, ಇಂತವರಿಗೆ ಆಸ್ತಿ ಕೊಡುವುದೂ ತಮಗೆ ಗೌರವದ ಸಂಗತಿ ಅಂತ ಎಲ್ಲರಲ್ಲೂ ಒಮ್ಮತದ ಅಭಿಪ್ರಾಯ ಮೂಡಿತ್ತು. ಆವತ್ತಿಗೆ ಮೂರುದಿನಗಳ ವಾಸ್ತವ್ಯ ಮುಗಿಯುತ್ತಿತ್ತು. ಬಟ್ಟೆಬರೆಗಳನ್ನು ಒಂದೆಡೆ ಜೋಡಿಸಿಕೊಳ್ಳುವ ಕೆಲಸ ಮಾಡಬೇಕಿತ್ತು.

***

ಮಲಗಿದರೆ ನಿದ್ದೆ ಹತ್ತಿರ ಸುಳಿಯಲಿಲ್ಲ. ರಾಜಕುಮಾರಿಯೋ, ಸೊಸೆಯೊ ಅಂತು ಪ್ರಾಣ ತೆತ್ತಿದ್ದು ಹೌದು ಅನಿಸುತ್ತಿತ್ತು. ಏನೋ ನಡೆದಿದೆ. ಆ ಕಾರಣಕ್ಕೆ ಇದೇ ಮನೆಯಲ್ಲಿ ಒಂದು ಮರ್ಯಾದಾ ಹತ್ಯೆಯಾಗಿದೆ. ಮಾಡಿದ್ದು ತಮ್ಮ ವಂಶದ ವೈದ್ಯರೆ? ಇಲ್ಲದಿದ್ದರೆ ಕತ್ತಿಯನ್ನು ಯಾಕೆ ಬಹುಮಾನದಲ್ಲಿ ಕೊಡುತ್ತಾರೆ? ರಾಜನ ಆಶಯವು ಆಜ್ಞೆಯೆ. ವೈದ್ಯನಾದರೇನು... ರಾಜಾ ಪ್ರತ್ಯಕ್ಷ ದೇವತಾ, ರಾಜವೈದ್ಯನಿಗೂ ಸಹ. ಆ ಕಾಲದ ಒಪ್ಪಿಕೊಂಡ ನೈತಿಕ ಮೌಲ್ಯದಲ್ಲಿ ಅದು ನಿಷ್ಠಾಪೂರ್ಣ ಶ್ರೇಷ್ಠ ಕೆಲಸವಾಗಿರಲೂ ಬಹುದು. ರಾಜ ಕೊಡುವ ಇನಾಮಿನಲ್ಲಿ ಕೆಟ್ಟದ್ದು ಒಳ್ಳೆಯದು ಅಂತಿಲ್ಲ. ರಾಜ ಕೊಟ್ಟದ್ದನ್ನು ಇಲ್ಲ ಅನ್ನಲಾಗದು. ಗೌರವದಿಂದ ಸ್ವೀಕರಿಸುವುದು ರಾಜೋದ್ಯೋಗಿಗೆ ಭೂಷಣ. ಕಪಾಟಿನಲ್ಲಿರುವ ಖಡ್ಗದ ಚಿತ್ರ ಮನದೆದುರು ಮೂಡಿತು. ನವರಾತ್ರಿಯಲ್ಲಿ ಅದಕ್ಕೆ ಪೂಜೆ ಸಲ್ಲಿಸಿ, ಹೊಳೆದಂಡೆಯಲ್ಲಿ ತಮ್ಮ ಮನೆ ಕೆಲಸದವ ತರುವ ಕೋಳಿಯನ್ನು ಕತ್ತರಿಸಿ, ಅದಕ್ಕೆ ರಕ್ತಬಲಿ ಕೊಡುವ ಸಂಪ್ರದಾಯ ತಪ್ಪದೆ ನಡೆದು ಬಂದಿದೆ. ಅದು ಪ್ರಾಣದ್ದೊ, ಮಾನದ್ದೊ, ಅಭಿಮಾನದ್ದೋ ಅಂತು, ಒಂದರ ಬಲಿ ಇನ್ನೊಂದರ ತೃಪ್ತಿ! ಕಣ್ಣು ತೇಲಿದಂತಾಗುತ್ತಿತ್ತು.

ಮಾನಸಿಕ ಆಯಾಸದಲ್ಲಿ ದೇಶ್ಪಂತರು ಒಂದು ರೀತಿ ಎಚ್ಚರತಪ್ಪಿದ ಬಗೆಯ ನಿದ್ದೆಗಿಳಿದಿದ್ದರು. ಎಂತೆಂತದೋ ವಿಚಿತ್ರ ಕನಸುಗಳು. ನಿದ್ದೆಯಲ್ಲಿ ಮನಸು ಶಾಂತವಾಗಬೇಕು. ಆದರೆ, ಅವರು ನಿದ್ದೆಯಲ್ಲೆ ಕನವರಿಸುತ್ತಾ ಪದೇಪದೇ ಮಗ್ಗಲು ಬದಲಿಸುತ್ತಲಿದ್ದರು. ಆರು ಗಂಟೆಗೆಲ್ಲ ಎದ್ದೇಳುವ ದಿನಚರಿಯಲ್ಲಿ ಎಂದೂ ತಪ್ಪದ ಗಂಡ ಎಂಟಾದರು ಏಳದ್ದು ನೋಡಿ, ಬಕುಲಾ ಹೋಗಿ ನೋಡಿದರೆ ಹಾಸಿಗೆಯಲ್ಲೆ ಇದ್ದಾರೆ. ಪಕ್ಕದ ಕೋಣೆಯಲ್ಲಿ ಹರಡಿಬಿದ್ದ ಕಡತ, ಕಾಗದಗಳ ರಾಶಿ ಕಂಡು, ಮಕ್ಕಳನ್ನು ಶಪಿಸುತ್ತ ಕೆಳಗಿಳಿದು ಬಂದರು.

ಬಕುಲಾ ಬಾಗಿಲೆಳೆದುಕೊಂಡು ತಿರುಗಿ ಹೋಗುವ ಸದ್ದಿಗೆ ದೇಶ್ಪಂತರು ಎಚ್ಚರಗೊಂಡರು. ಹೊರಗೆ ಬಿಸಿಲು ಬಿದ್ದಿದ್ದು ಕಿಟಕಿಯಿಂದ ಕಾಣಿಸಿತು. ತಟ್ಟನೆ ಎದ್ದು, ಕೆಳಗಿಳಿದು ಬಚ್ಚಲಿಗೆ ಹೋಗಿ ಸ್ನಾನಕ್ಕಿಳಿದರು. ದೇವರಿಗೆ ನಮಸ್ಕಾರ ಮಾಡಿ ಬಂದವರೆದುರು ತಿಂಡಿಯನ್ನಿಟ್ಟರು ಬಕುಲಾ. ತಿಂಡಿ ತಿನ್ನುತ್ತಾ ಮೇಲೆ ನೋಡಿದವರಿಗೆ, ತಮ್ಮನ್ನೆಲ್ಲ ಒಳಗಿಟ್ಟುಕೊಂಡು ಆವರಿಸಿಕೊಂಡ ಕಟ್ಟಡದ ಒಳಭಾಗ ಗೋಚರಿಸಿತು. ಇಲ್ಲಿ ನಿತ್ಯ, ನೂರಾರು ಪ್ರಯಾಣಿಕರು ಬರುವುದು ಹೋಗುವುದು ಮಾಡುತ್ತಿದ್ದರು. ಬಡವರು, ಶ್ರೀಮಂತರು, ಕಳ್ಳರು, ಬೇಹುಗಾರಿಕೆಯವರು ಯಾರ್ಯಾರು ಎಂತೆಂತಹ ಕಾರಸ್ಥಾನದವರೆಲ್ಲ ಮಲಗಿದ್ದರೋ, ಊಟ ಮಾಡಿದ್ದರೋ. ಆಗ ಪ್ರಯಾಣಿಕರ ರಾಜಛತ್ರವಾಗಿದ್ದನ್ನು ಒಂದು ಹತ್ಯೆ ತಮಗೆ ದಾಟಿಸಿತು. ಈಗ ಮತ್ತೆ, ಉದ್ಯಮಿಯೊಬ್ಬ ಪಡೆದು ರಾಜಭೋಗ ನೀಡುವ ಯಾತ್ರಿನಿಲಯ ಮಾಡುವ ಹುನ್ನಾರದಲ್ಲಿದ್ದಾನೆ! ಅದಕ್ಕೆ ಸಂಬಂಧಗಳ ಹತ್ಯೆ ನಡೆಯಬೇಕು. ಕಾಲಚಕ್ರ ಹೇಗೆ ತಿರುಗುತ್ತದೆ... ಅಬ್ಬಾ! ದೇಶ್ಪಂತರು ತಟ್ಟನೆ ನಗತೊಡಗಿದರು. ಕುಡಿಯುತ್ತಿದ್ದ ಚಹ ಬಾಯಿಂದ ಕೆಳಗೆಲ್ಲ ಬಿತ್ತು. ಹೆಂಡತಿ ಆತಂಕದಿಂದ ತಮ್ಮನ್ನು ನೋಡುವುದು ಕಂಡು 'ಏನೋ ನೆನಪಾಯ್ತು. ನಗುಬಂತು ಅಷ್ಟೇ...' ಅಂದವರು ಗಂಭೀರರಾದರು. ಅವರಿಗೆ ಇದ್ದಕ್ಕಿದ್ದಂತೆ ನಿರಾಸಕ್ತಿ ಆವರಿಸಿತು. ಭವನ ಏನಾದರೇನು ಅನ್ನುವ ನಿರ್ಲಿಪ್ತತೆ ಕವಿಯಿತು. ನಿರಾಳವಾಗಿ ಎಂದಿನಂತೆ ಓಡಾಡಿಕೊಂಡಿರತೊಡಗಿದರು.

ಎರಡು ದಿನ ಬಿಟ್ಟು, ಆನಂದನಿಗೆ 'ಸಬ್ ರಿಜಿಸ್ಟ್ರಾರ್ ಆಫೀಸಿಗೆ ಹೋಗೋಣ ತಯಾರಾಗು' ಅಂದರು. ಅವರ ಕೈಯಲ್ಲಿ ಸ್ಟಾಂಪ್ ಪೇಪರಿತ್ತು. ಆನಂದನ ಮುಖದಲ್ಲಿ ಅಚ್ಚರಿ ಕಂಡು 'ಅಡಕೆತೋಟ ಹಾಕಿದ ಜಾಗ ನಾನು ಸಂಪಾದಿಸಿದ್ದು. ನಿಂಗೆ ಕೊಡತಿದ್ದೇನೆ. ಯಾರೂ ಕೇಳೋಹಾಗಿಲ್ಲ. ಇದು ನಿನ್ನ ಚಂದನಿಕಾ ಮದುವೆಗೆ ನಮ್ಮ ಉಡುಗೊರೆ' ಅಂದರು.

ಒಂದು ವಾರವಾಗಿತ್ತು. ಕೋರ್ಟಿಂದ ನೋಟಿಸು ಬಂತು. ಮೂರುಜನ ಮಕ್ಕಳು ಪುರಾತನ ಭವನದಲ್ಲಿ ಪಾಲು ಕೇಳಿ, ಪ್ರಕರಣ ದಾಖಲಿಸಿದ್ದರು. ಅದಕ್ಕುತ್ತರಿಸಲೇ ಬೇಕಿತ್ತು. ಒಬ್ಬರು ಗುರುತಿನ ವಕೀಲರ ಮೂಲಕ, ಸದರಿ ಕಟ್ಟಡ ತಮ್ಮ ವಂಶದ ಗೌರವದ ಗುರುತಾಗಿದ್ದು, ಅದನ್ನು ಹೋಟೆಲಾಗಿ ಪರಿವರ್ತಿಸುವ ದುರುದ್ದೇಶವುಳ್ಳ ಉದ್ಯಮಿಯೊಬ್ಬರಿಗೆ ಮಾರಿಕೊಳ್ಳುವ ದುರಾಸೆಯಿಂದ ಪಾಲು ಕೇಳುತ್ತಿದ್ದಾರೆಯೆ ಹೊರತು, ಅವರಿಗದರ ಅವಶ್ಯಕತೆಯಿಲ್ಲ. ಅಲ್ಲದೆ, ಇದು ಹೇಗೆ ಪುರಾತನ ಕಾಲದ ಸಂಸ್ಕೃತಿಯ ಗುರುತಾಗಿದ್ದು, ಇದನ್ನು ಕೇವಲ ಒಂದು ಕಟ್ಟಡವೆಂದು ಪರಿಗಣಿಸಲಾಗದು ಅಂತ ವಿವರಿಸಿ, ವಾದಿಗಳ ಬೇಡಿಕೆಯನ್ನು ಪುರಸ್ಕರಿಸಬಾರದು ಅನ್ನುವ ಪ್ರತಿವಾದವನ್ನು ಹೂಡಿದರು.

ಮೊದಲ ವಾಯದೆಯ ದಿನ ದೇಶ್ಪಂತರು ಕೋರ್ಟಿಗೆ ಹೋದರು. ಮೂವರೂ ಮಕ್ಕಳು ಅಲ್ಲಿಗೆ ಬಂದಿದ್ದರು. ಅವರಕಡೆ ವಕೀಲರ ಜೊತೆ ಮತ್ತಿಬ್ಬರಿದ್ದರು. ಅವರಿಬ್ಬರೂ ಪ್ರಸಿದ್ಧ ವಕೀಲರು, ಬಿಕಾನೇರಿ ಕಂಪನಿಗಳ ಕಾನೂನು ಸಲಹೆಗಾರರ ಪ್ಯಾನಲ್ಲಿನಲ್ಲಿರುವವರು ಅನ್ನುವುದು ದೇಶ್ಪಂತರಿಗೆ ತಮ್ಮ ವಕೀಲರಿಂದ ತಿಳಿಯಿತು. ಮೊದಲ ದಿನ ಹೆಚ್ಚೇನು ನಡೆಯಲಿಲ್ಲ. ಪ್ರಕರಣವನ್ನು ಕೋರ್ಟು ಸ್ವೀಕರಿಸಿತು. ಮುಂದಿನ ವಾಯದೆಯ ದಿನಾಂಕ ಒಂದು ತಿಂಗಳ ನಂತರವಿತ್ತು. ಅಂಗಳದಲ್ಲಿ ಹೂವಿನ ಗಿಡಕ್ಕೆ ಗೊಬ್ಬರ ಹಾಕುತ್ತಿದ್ದ ಆನಂದ. ದೇಶ್ಪಂತರು ಮತ್ತು ಬಕುಲಾ ಅವನ ಕೆಲಸ ನೋಡುತ್ತಾ ಹಾಗೇ ನಿಂತಿದ್ದರು. ಹೆಂಡತಿಯತ್ತ ತಿರುಗಿದವರು, 'ಬಕುಲಾ, ನಾವು ಯಾಕಾಗಿ ಇನ್ನೂ ತಡಮಾಡುವುದು? ಆನಂದ ಚಂದನಿಕಾರ ಮದುವೆಯಾಗಿಬಿಡ್ಲಿ...' ಅಂದರು. ಆನಂದ 'ಅಜ್ಜಾ, ಅದಕ್ಕೀಗ ಏನವಸರ? ಇದೆಲ್ಲಾ ಒಂದುಸಾರಿ ಮುಗಿಯಲಿ' ಅಂದ. ಅವರು ನಕ್ಕರು 'ಮುಗಿದರೂ ಅಷ್ಟೆ, ಮುಗೀದಿದ್ದರೂ ಅಷ್ಟೇ. ನಿನ್ನ ಮದುವೆಗೇನೋ ಅಡ್ಡಿ? ಮುಹೂರ್ತ ನೋಡಿ ಮುಗಿಸೋಣ' ಅಂದರು ನಿರ್ಧರಿಸಿದವರಂತೆ. ಆಮೇಲೆ, ಏನೋ ಯೋಚಿಸಿದವರಂತೆ 'ನಮ್ಮ ತೋಟದ ಹತ್ತಿರ ಜಾಗವಿದೆಯಲ್ಲ, ಅಲ್ಲೊಂದು ಚಿಕ್ಕ ಮನೆ ಕಟ್ಟಿಸಿದರೆ ಹೇಗೋ ಆನಂದ?' ಕೇಳಿದರು. ಕೆಲಸ ನಿಲ್ಲಿಸಿದ ಆನಂದ ಅಜ್ಜನನ್ನ ಅಚ್ಚರಿಯಿಂದ ನೋಡಿದ. ಅವರು ಮುಗುಳ್ನಗುತ್ತ 'ಹೌದೋ ನಮ್ಮ ಮನೆ. ನಾವಿಬ್ಬರು ಮುದುಕರು, ದೇವಣ್ಣ. ನೀವಿಬ್ಬರು... ಎಷ್ಟು ದೊಡ್ಡ ಮನೆ ಬೇಕು?' ಅಂದರು.

ಎರಡನೆ ವಾಯಿದೆಯಲ್ಲಿ ಎರಡೂ ಕಡೆಯವರ ವಿಚಾರಣೆ ನಡೆಯಿತು. ಕೆಲವು ದಾಖಲೆಗಳನ್ನು ಹಾಜರು ಪಡಿಸಲು ಹೇಳಿದರು. ಮತ್ತೆ ಒಂದು ತಿಂಗಳಿಗೆ ಮುಂದೂಡಿತು ನ್ಯಾಯಾಲಯ.

'ನಾವೆಲ್ಲಾ ಸಾಧ್ಯವಿರುವ ಪ್ರಯತ್ನ ಮಾಡೋಣ. ಆದರೆ ಪರಿಸ್ಥಿತಿ ಅವರಿಗೆ ಸಹಾಯಕವಾಗುವಂತಿದೆ. ಐತಿಹಾಸಿಕ ಮಹತ್ವ, ವಂಶದ ಗೌರವ ಇದನ್ನೆಲ್ಲಾ ನ್ಯಾಯಾಲಯ ಎಷ್ಟರಮಟ್ಟಿಗೆ ಪರಿಗಣಿಸ್ತದೋ ಸಂಶಯ' ಅಂತ ಹೇಳಿದ ವಕೀಲರು, ತೀರ್ಪು ಅವರ ಕಡೇನೆ ಬರಬಹುದು ಅನ್ನೋ ಅಭಿಪ್ರಾಯ ಪಟ್ಟರು. ಅದೇನು ಬರುತ್ತದೊ ನಾವು ಒಪ್ಪಿಕೊಂಡರಾಯಿತು ಅಂದುಬಿಟ್ಟರು ದೇಶ್ಪಂತರು. ಅವರೀಗ ಅಂತಹ ಒತ್ತಡ ಅನುಭವಿಸುತ್ತಿರಲಿಲ್ಲ.

ಅವತ್ತು 'ನಾಳೆ ವಾಯಿದೆ ಅಲ್ವಾ?' ನೆನಪಿಸಿದರು ಬಕುಲಾ. ಏನಾಗುತ್ತದೊ ಅನ್ನುವ ಆತಂಕ ದನಿಯಲ್ಲಿ ಕಾಣುತ್ತಿತ್ತು. 'ಹೂಂ...' ಅಂತಷ್ಟೆ ಪ್ರತಿಕ್ರಿಯೆ ನೀಡಿದರು ದೇಶ್ಪಂತರು ಓದುತ್ತಿದ್ದ ಪತ್ರಿಕೆಯಿಂದ ತಲೆಯೆತ್ತದೆ. ಅದನ್ನು ನೋಡಿದ ಬಕುಲಾ 'ಅಲ್ಲ, ಒಂದುಮಾತು ಕೇಳಲಾ? ಇದ್ದಕ್ಕಿದ್ದಂತೆ ನೀವು ನಿರಾಸಕ್ತಿ ಬೆಳೆಸಿಕೊಂಡ ಹಾಗೆ ಅನಿಸತಿದೆ ನಂಗೆ.' ದೇಶ್ಪಂತರು ಆಗಲು ತಲೆಯೆತ್ತದೆ ಉತ್ತರಿಸಿದರು: 'ಆಸಕ್ತಿ ಅನಾಸಕ್ತಿಯ ಪ್ರಶ್ನೆಯಲ್ಲ ಇದು. ನಿರ್ಣಯಿಸಬೇಕಾದ್ದು ಕೋರ್ಟು. ವಾದ ಮಂಡಿಸಬೇಕಾದವರು ವಕೀಲರು. ತೀರ್ಪು ಬರಲಿ ಬಿಡು.'

ಆನಂದ ಮೆತ್ತಿನ ಮೇಲಿದ್ದ. ದೇಶ್ಪಂತರು ಕೋಣೆಯಲ್ಲಿ ಏನೋ ಓದುತ್ತಿದ್ದರು. ಕೆಳಗೆ ಪಡಸಾಲೆಯಲ್ಲಿ ಕುಳಿತಿದ್ದ ಬಕುಲಾ ಕರೆದ ಧ್ವನಿಗೆ ಗಾಬರಿಯಾಗಿ ಇಬ್ಬರೂ ಧಾವಿಸಿ ಬಂದರು. ಉದ್ವೇಗದಲ್ಲಿದ್ದ ಬಕುಲಾ ಟೀವಿಯತ್ತ ಒಂದೇಸಮ ಬೆರಳು ತೋರಿಸುತ್ತಿದ್ದರು. ಅಲ್ಲಿ ನೋಡಿದರೆ ಟೀವಿ ವಾಹಿನಿ ದಪ್ಪಕ್ಷರದಲ್ಲಿ, ಎತ್ತರದ ದನಿಯಲ್ಲಿ ಬಿತ್ತರಿಸುತ್ತಿತ್ತು. ಹೆಸರಾಂತ ಉದ್ಯಮಿ ಲಾಲಕಿಶೋರ್ ಬಿಕಾನೇರಿ, ತನ್ನ ಖಾಸಗಿ ಹೆಲಿಕಾಪ್ಟರಿನಲ್ಲಿ, ಡಾರ್ಜಿಲಿಂಗಿನ ಚಹಾ ಎಸ್ಟೇಟಿನ ಸಮಾರಂಭದಲ್ಲಿ ಭಾಗವಹಿಸಲು ಹೊರಟಿದ್ದ. ಸಿಲಿಗುರಿಯ ಹತ್ತಿರ ಹೆಲಿಕಾಪ್ಟರ್ ಪತನ ಹೊಂದಿತ್ತು! ಕಾರಣ ಇನ್ನಷ್ಟೇ ಗೊತ್ತಾಗಬೇಕಿತ್ತು.